


# ಉನ್ನಿಕಥಾ

ಮುಕುಂದನ್
ಕಲೆ: ಅತನು ರಾಯ್

ಕಥಾದಿಂದ ಒಂದು 300ಎಂ ಥಿಂಕ್‌ಬುಕ್




ಉನ್ನಿ,' ಅವನ ಅಜ್ಜಿ ಹೇಳಿದಳು, 'ಒಂದು ಕಥೆ ಹೇಳು.'

ಉನ್ನಿ ಬೇಗನೆ ತನ್ನ ಪುಸ್ತಕಗಳನ್ನು ತೆಗೆದಿಟ್ಟ. ತನ್ನ ಅಜ್ಜಿಯ ಹತ್ತಿರ ಬಂದು ತಬ್ಬಿಕೊಂಡು ಕುಳಿತ. 'ಮುತಾಶಿ,' ಮೆಲ್ಲನೆ ಹೇಳಿದ, 'ಕೇಳು. ಇದು ಗಾಜಿನ ಮರದ ಬಗ್ಗೆ ಇರುವ ಸಣ್ಣದೊಂದು ಕಥೆ. ನೋಡು!'

ಉನ್ನಿ ತನ್ನ ಎದುರಿಗಿದ್ದ ಖಾಲಿ ಗೋಡೆಯ ಕಡೆ ಕೈ ತೋರಿಸುತ್ತಿದ್ದಂತೆ ಮುತಾಶಿಗೆ ಒಂದು ವಿಚಿತ್ರ ಕಾಣಿಸಿತು! ರಾಜನಂತಿರುವ ವ್ಯಕ್ತಿಯನ್ನು ಪಲ್ಲಕ್ಕಿಯಲ್ಲಿ ಹೊತ್ತೊಯ್ಯುತ್ತಿರುವುದನ್ನು ಅವಳು ನೋಡಿದಳು.






**ಉನ್ನಿ ಕಥೆ ಹೇಳಲು ಪ್ರಾರಂಭಿಸಿದ.**

ಒಂದಾನೊಂದು ಕಾಲದಲ್ಲಿ ಒಬ್ಬ ಯಜಮಾನನಿದ್ದರು. ಅವರನ್ನು ಕುರುಮಾನ್ ಪಣಿಕ್ಕನ್ ಎಂದು ಕರೆಯುತ್ತಿದ್ದರು. ಒಂದು ದಿನ ಅವರು ಪ್ರಾರ್ಥನೆ ಮಾಡಲೆಂದು ಹಳೆಯ ದೊಡ್ಡ ಸಂಪಿಗೆ ಮರದ ಕೆಳಗಿದ್ದ ಕಲ್ಲಿನ ವಿಗ್ರಹದತ್ತ ಹೋದರು. ಅವರು ಪ್ರಾರ್ಥಿಸುತ್ತಿರುವಾಗ ಒಬ್ಬ ಅಪರಿಚಿತ ಅವರ ಮುಂದೆ ಬಂದು ನಿಂತ.

‘ನಾನು ಮೇಲ್‌ಕೊರನ್’ ಅಪರಿಚಿತ ಹೇಳಿದ. ‘ನಾನು ಪಶ್ಚಿಮದಿಂದ ಬಂದಿದ್ದೇನೆ.’

‘ನಿನಗೇನು ಬೇಕು?’ ಎಂದು ಕುರುಮಾನ್ ಕೇಳಿದರು. ‘ನಿಮ್ಮ ಮರ ಹಳೆಯದಾಗಿದೆ. ಒಂದು ದಿನ ಅದು ಸತ್ತುಹೋಗುತ್ತದೆ,’ ಎಂದು ಸುವಾಸನೆಯ ಬಿಳಿ ಹೂವುಗಳಿಂದ ತುಂಬಿದ ಸಂಪಿಗೆ ಮರವನ್ನು ತೋರಿಸುತ್ತಾ ಮೇಲ್‌ಕೊರನ್ ಹೇಳಿದನು. ‘ನಾನು ನಿಮಗೆ ಒಂದು ಸುಂದರವಾದ ಹೊಸ ಮರವನ್ನು ನಿರ್ಮಿಸಿಕೊಡಬಲ್ಲೆ, ಅದಕ್ಕೆ ಎಂದಿಗೂ ವಯಸ್ಸಾಗುವುದಿಲ್ಲ ಅಥವಾ ಎಂದಿಗೂ ತನ್ನ ಎಲೆಗಳನ್ನು ಉದುರಿಸುವುದಿಲ್ಲ.’



‘ಹೌದಾ?’ ಎಂದು ಕುರುಮಾನ್ ಪಣಿಕ್ಕನ್ ಕೇಳಿದರು, ಎಂದಿಗೂ ಸಾಯದ ಮರದ ಕಲ್ಪನೆ ಅವರಿಗೆ ಇಷ್ಟವಾಯಿತು. ‘ಸರಿ,’ ಎಂದು ಕೈ ಬೀಸಿ ‘ಅಂತಹ ಮರವನ್ನು ನನಗೆ ನಿರ್ಮಿಸಿಕೊಡು’ ಎಂದರು.




ಮೇಲ್‌ಕೊರನ್ ತನ್ನ ಕೊಡಲಿಯನ್ನು ತಂದನು. ಹಲವು ವರ್ಷಗಳಿಂದ ಅಲ್ಲಿ ನಿಂತಿದ್ದ ಹಳೆಯ ಮರ ಸ್ವಲ್ಪವೇ ಸಮಯದಲ್ಲಿ ನೆಲಕ್ಕೆ ಉರುಳಿತು.
ಮೊಟ್ಟೆಗಳು ಮತ್ತು ಚಿಕ್ಕ ಹಕ್ಕಿಮರಿಗಳೊಂದಿಗೆ ಗೂಡುಗಳು ಕೆಳಕ್ಕೆ ಬಿದ್ದವು. ತಂದೆ ಮತ್ತು ತಾಯಿ ಹಕ್ಕಿಗಳು ಕೂಗುತ್ತಾ ಗಾಳಿಯಲ್ಲಿ ಹಾರಿದವು.

ಮೇಲ್‌ಕೊರನ್ ತನ್ನ ಮರದ ಕೆಲಸವನ್ನು ಪ್ರಾರಂಭಿಸಿದನು. ಅವನು ಬಣ್ಣದ ಗಾಜಿನ ಅನೇಕ ತುಂಡುಗಳನ್ನು ತಂದನು. ನಿಧಾನವಾಗಿ, ಬಹಳ ಕಾಳಜಿಯಿಂದ, ಅವನು ಬೇರುಗಳು ಮತ್ತು ಕಾಂಡವನ್ನು ರೂಪಿಸಿದನು. ಆಮೇಲೆ ಕೊಂಬೆಗಳು ಬಂದವು. ಎಲೆ ಮತ್ತು ಹೂವುಗಳಿಗಾಗಿ ಅವನು ಹಸಿರು ಮತ್ತು ಬಿಳಿ ಗಾಜನ್ನು ಬಳಸಿದನು. ಪ್ರತಿಯೊಂದು ಭಾಗವನ್ನೂ ಅವನು ಪ್ರೀತಿಯಿಂದ ನಿರ್ಮಿಸಿದನು.



ಒಂದೂವರೆ ವರ್ಷ ಕಳೆಯಿತು. ಮರವು ಬಿಸಿಲಿನಲ್ಲಿ ಮಿನುಗಿತು ಮತ್ತು ಹೊಳೆಯಿತು. ಸೂರ್ಯೋದಯ ಮತ್ತು ಸೂರ್ಯಾಸ್ತದ ಬಣ್ಣಗಳು ಗಾಜಿನ ಎಲೆಗಳ ನಡುವೆ ಇಳಿದವು. ಈ ಅದ್ಭುತ ಮರವನ್ನು ನೋಡಲು ಜನರು ದೂರದೂರದಿಂದ ಬಂದರು. ಪಣಿಕ್ಕನ್ನರಿಗೂ ಬಹಳ ಸಂತೋಷವಾಯಿತು.









ಅದರ ಕೊಂಬೆಗಳಲ್ಲಿ ಹೊಳೆಯುವ ಗಾಜಿನ ಗೂಡುಗಳಿದ್ದರೂ, ಯಾವ ಪಕ್ಷಿಯೂ ಅಲ್ಲಿ ನೆಲೆಸಲಿಲ್ಲ. ಯಾವ ಮಗುವೂ ಅದರ ಕೊಂಬೆಗಳನ್ನು ಹತ್ತಲಿಲ್ಲ...

ಆದರೆ ಗಾಜಿನ ಮರ ಮಾತ್ರ ಸುಂದರವಾಗಿತ್ತು. ಅದರ ಹೂವುಗಳಿಗೆ ವಾಸನೆಯೇ ಇರಲಿಲ್ಲ.

ಗಾಜಿನ ಮರ ಎಂದಾದರೂ ನಿಜವಾದ ಮರವಾಗಬಹುದೇ?' ತನ್ನ ಕಥೆ ಮುಗಿಯುತ್ತಿದ್ದಂತೆ ಉನ್ನಿ ಆಶ್ಚರ್ಯಪಟ್ಟನು. ಗೋಡೆಯಿಂದ ಚಿತ್ರಗಳು ಮರೆಯಾಗುತ್ತಿದ್ದಂತೆ, ಉನ್ನಿ ಅಜ್ಜಿಯ ಕಡೆಗೆ ತಿರುಗಿದನು. ಆದರೆ ಅವಳು ಗಾಢ ನಿದ್ದೆಯಲ್ಲಿದ್ದಳು.

**ಎಂ. ಮುಕುಂದನ್** ಅವರು ಕೇರಳದ ಮಾಹೆಯಲ್ಲಿ ಜನಿಸಿದರು ಮತ್ತು 1961ರಲ್ಲಿ ತಮ್ಮ ಮೊದಲ ಕಥೆಯನ್ನು ಬರೆದರು. ಅವರ 26 ಕೃತಿಗಳು ಪ್ರಕಟವಾಗಿವೆ. ಸಾಹಿತ್ಯ ಕ್ಷೇತ್ರದಲ್ಲಿ ಅವರ ಕೊಡುಗೆಗಳಿಗಾಗಿ ಅವರಿಗೆ 1998ರಲ್ಲಿ ಫ್ರೆಂಚ್ ಸರ್ಕಾರವು ಚೆವಲಿಯರ್ ಪ್ರಶಸ್ತಿಯನ್ನು ನೀಡಿತು. ಉಣ್ಣಿಕಥಾ ಕಥೆಗೆ ಅವರು ಕಥಾ ಪ್ರಶಸ್ತಿಯನ್ನು ಪಡೆದಿದ್ದಾರೆ.

ನೂರಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳಿಗೆ ಚಿತ್ರರಚನೆ ಮಾಡಿರುವ ಅತನು ರಾಯ್, ತಮ್ಮ ಕ್ರಿಯಾತ್ಮಕ ಸಾಮರ್ಥ್ಯದ ಬಹುಪಾಲನ್ನು ಮಕ್ಕಳ ಸಾಹಿತ್ಯಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ಹಿಂದೆ ಇಂಡಿಯಾ ಟುಡೆಯಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರರಾಗಿ ಕೆಲಸಮಾಡಿದ್ದ ರಾಯ್ ಅವರಿಗೆ ಚಿಲ್ಡ್ರನ್ಸ್ ಚಾಯ್ಸ್ ಅವಾರ್ಡ್ ಫಾರ್ ಬುಕ್ ಇಲ್ಲಸ್ಟ್ರೇಶನ್ಸ್ ಹಾಗೂ ಐಬಿಬಿವೈ ಸರ್ಟಿಫಿಕೇಟ್ ಆಫ್ ಆನರ್ ಫಾರ್ ಇಲ್ಲಸ್ಟ್ರೇಶನ್ಸ್‌ನಂತಹ ಪ್ರಶಸ್ತಿಗಳು ಸಂದಿರುವುದರಲ್ಲಿ ಯಾವುದೇ ಆಶ್ಚರ್ಯ ಇಲ್ಲ.

KATHA

**ಕಥಾ ಒಂದು ಪ್ರಸಿದ್ಧಲಾಭರಹಿತ ಸಂಸ್ಥೆಯಾಗಿದ್ದು (www.katha.org), ಅಕ್ಷರಜ್ಞಾನದಿಂದಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ 1988ರಿಂದ ಕೆಲಸ ಮಾಡುತ್ತಿದೆ. ಸುಮಾರು 30 ವರ್ಷಗಳ ನಮ್ಮ ಅನುಭವವು ಬಡ ಮಕ್ಕಳ ಪುಸ್ತಕಮತ್ತು ಶಿಕ್ಷಣದ ಕ್ಷೇತ್ರದಲ್ಲಿದೆ.**

"ಭಾರತದ ಕಿರೀಟದಲ್ಲೊಂದು ಶಿಕ್ಷಣದ ಆಭರಣ." **– ನವೋಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕರು, ಐಎಂಎಫ್**

"ನಗರಗಳಲ್ಲಿನ ಸಾಮಾನ್ಯ ಮತ್ತು ಅನಿರೀಕ್ಷಿತ ದುಃಖಗಳೊಡನೆ ಸೆಣಸಾಡುವ ಜಗತ್ತಿನ ಎಲ್ಲ ಸೃಜನಶೀಲ ಯೋಜನೆಗಳಿಗೆ ಕಥಾ ಒಂದು ಉದಾಹರಣೆಯಾಗಿದೆ." **– ಚಾರ್ಲ್ಸ್ ಲ್ಯಾಂಡ್ರಿ, ದಿ ಆರ್ಟ್ ಆಫ್ ಸಿಟಿ ಮೇಕಿಂಗ್**

"ಕಥಾ ಮಕ್ಕಳ ಕುರಿತು ನಿಜವಾದ ಕಾಳಜಿ ಇಟ್ಟುಕೊಂಡಿದೆ. ಅದಕ್ಕಾಗಿಯೇ ಅದು... ಮಕ್ಕಳಿಗಾಗಿ ಅಷ್ಟೊಂದು ಸುಂದರವಾದ ಚಿತ್ರದ ಪುಸ್ತಕಗಳನ್ನು ರೂಪಿಸುತ್ತದೆ." **– ಟೈಮ್ ಔಟ್**

"ಮಕ್ಕಳು[ತಮ್ಮ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಲ್ಲಿ ಮುಂದುವರೆಯುವಂತಹ ಮತ್ತು ನಿಜವಾದ ಬದಲಾವಣೆ ತರಬಹುದು ಎಂಬ ಭಾವನೆ ಕಥಾದ ಕೆಲಸಕ್ಕೆ ಚಾಲನೆ ನೀಡುತ್ತದೆ." **– ಪೇಪರ್ ಟೈಗರ್ಸ್**

ಈ ಆವೃತ್ತಿ ಮೊದಲ ಬಾರಿಗೆ 2021ರಲ್ಲಿ ಪ್ರಕಟವಾಯಿತು
ಕಾಪಿರೈಟ್ © ಕಥಾ, 1995, 2021
ಪಠ್ಯದ ಕಾಪಿರೈಟ್ © ಎಂ. ಮುಕುಂದನ್
ಛಾಯಾಚಿತ್ರಗಳ ಕಾಪಿರೈಟ್ © ಕಥಾ
ಎ3, ಸರ್ವೋದಯ ಎನ್‌ಕ್ಲೇವ್, ಶ್ರೀ ಅರವಿಂದೋ ಮಾರ್ಗ, ನವದೆಹಲಿ 110 017.
ದೂರವಾಣಿ: 91–11 4141 6600 . 4141 6610
ಇ–ಮೇಲ್: editors@katha.org, ವೆಬ್‌ಸೈಟ್: www.katha.org
ಐಎಸ್‌ಬಿಎನ್ 978–93–82454–65–6

**ನಮ್ಮ ಧ್ಯೇಯ:** ಪ್ರತಿಯೊಂದು ಮಗುವೂ ಚೆನ್ನಾಗಿ ಓದಬೇಕು, ಖುಷಿಗಾಗಿ ಓದಬೇಕು!

ಕಥಾ ಎಂಬುದು 1988ರಲ್ಲಿ ಪ್ರಾರಂಭವಾದ ಒಂದು ನೋಂದಾಯಿತ, ಲಾಭರಹಿತ ಸಂಸ್ಥೆ. ನಾವು ಅಕ್ಷರಜ್ಞಾನದಿಂದ ಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತೇವೆ. ಮಕ್ಕಳು ಮತ್ತು ವಯಸ್ಕರಲ್ಲಿ ಓದುವ ಸಂತೋಷವನ್ನು ಹೆಚ್ಚಿಸುವ ಉದ್ದೇಶ ಇಟ್ಟುಕೊಂಡಿರುವ ನಾವು, ಗುಣಮಟ್ಟದ ಪುಸ್ತಕಗಳು ಮತ್ತು ಸಹಾಯದ ಮೂಲಕ 1,00,000ಕ್ಕೂ ಹೆಚ್ಚು ಬಡ ಮಕ್ಕಳನ್ನು ಗ್ರೇಡ್ ಮಟ್ಟದ ಓದುವಿಕೆಗೆ ಕರೆತರಲು ಅವರೊಂದಿಗೆ ಕೆಲಸ ಮಾಡುತ್ತೇವೆ.

**ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರುಬಳಕೆ ಮಾಡುವಂತಿಲ್ಲ ಅಥವಾ ಬಳಸಿಕೊಳ್ಳುವಂತಿಲ್ಲ.**
**ಈ ಪುಸ್ತಕಗಳ ಮಾರಾಟದಿಂದ ಬರುವ ಒಟ್ಟು ಆದಾಯದ 10% ಮೊತ್ತವು, ಸವಲತ್ತುಗಳಿಲ್ಲದ ಮಕ್ಕಳ ಓದುವಿಕೆ ಮತ್ತು ಜೀವನ ಪರ್ಯಂತದ ಕಲಿಕೆಯ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.**




ಐ ಲವ್ ರೀಡಿಂಗ್ ಲೈಬ್ರರಿ ಒಂದು ಅನನ್ಯ ಪುಸ್ತಕಗಳ ಸರಣಿಯಾಗಿದ್ದು, ಅದು ಹೊಸ ಮತ್ತು ಸಂಕೋಚ ಸ್ವಭಾವದ ಓದುಗರನ್ನು ಸುಲಭವಾಗಿ ಓದುವಂತೆ ಮಾಡುತ್ತದೆ. ಓದಿನ ವಿಭಿನ್ನ ಹಂತದಲ್ಲಿರುವ ಮಕ್ಕಳ ಕಲಿಕೆಯ ಅಗತ್ಯಗಳಿಗೆ ಸರಿಹೊಂದುವಂತೆ ಉತ್ತಮ ಗುಣಮಟ್ಟದ ವಿಷಯ ಮತ್ತು ವಿನ್ಯಾಸದೊಂದಿಗೆ, ಇದು ಭಾರತ ಮತ್ತು ಪ್ರಪಂಚದ ಅತ್ಯುತ್ತಮ ಸಾಹಿತ್ಯಕ ರಚನೆಗಳು ಮತ್ತು ಕಲಾಕೃತಿಗಳನ್ನು ಒಟ್ಟಿಗೆ ತರುತ್ತದೆ. ನಮ್ಮ ಪುಸ್ತಕಗಳು ಗೀತಾ ಧರ್ಮರಾಜನ್‌ರ ಅನನ್ಯ ಶಿಕ್ಷಣ ಮಾದರಿಯಾದ "ಸ್ಟೋರಿಪೆಡಗಾಜಿ™" ಯ ಸ್ವರೂಪ ಪಡೆದಿವೆ, ಈ ಮಾದರಿಯುವಿಶೇಷವಾಗಿ ಮೊದಲ ತಲೆಮಾರಿನ ಓದುಗರಲ್ಲಿ ಓದಿನ ಸಂತೋಷವನ್ನು ಉತ್ತೇಜಿಸುತ್ತದೆ ಹಾಗೂ ಮಗುವನ್ನು ಬಿಗ್ ಐಡಿಯಾಸ್ ಮತ್ತು **TA-DAA!** (ಥಿಂಕ್, ಆಸ್ಕ್, ಡಿಸ್ಕಸ್, ಆಕ್ಟ್ ಹಾಗೂ ಅಚೀವ್) ಆಕರ್ಷಕ ಜಗತ್ತಿಗೆ ಕರೆದೊಯ್ಯುತ್ತದೆ!

ಕಥಾದ ಹೋಲಿಸ್ಟಿಕ್ ಅರ್ಲಿ ಲರ್ನಿಂಗ್ (**KHEL!**) ಲ್ಯಾಬ್ ಸರ್ಕಾರಿ, ಲಾಭೋದ್ದೇಶವಿಲ್ಲದ ಮತ್ತು ಖಾಸಗಿ ಶಾಲೆಗಳಲ್ಲಿನ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ನಡೆಸುತ್ತದೆ. ಆನ್‌ಲೈನ್ ಸೆಶನ್‌ಗಳಿಂದ ಬೆಂಬಲಿತವಾದ ಈ **F2F** (ಫೇಸ್–ಟು–ಫೇಸ್) ಕಾರ್ಯಾಗಾರಗಳು ಶಿಕ್ಷಕರು, ಶಾಲಾ ಆಡಳಿತಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ "ರೀಡಿಂಗ್ ಟೀಚರ್ಸ್ ಪ್ರಮಾಣಪತ್ರ"ವನ್ನು ದೊರಕಿಸಿಕೊಡುತ್ತವೆ. ಇನ್ನಷ್ಟು ತಿಳಿದುಕೊಳ್ಳಲು, **300m@katha.org** ಸಂಪರ್ಕಿಸಿ

ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು

ಗ್ರೀನ್ ಸೀರೀಸ್‌ನಲ್ಲಿ

ಸಂತೋಷ ಮತ್ತು ಉತ್ಸಾಹದಿಂದ ಓದಿ





































FOR OUR BOOKS

www.books.katha.org

"[ಕಥಾ] ... ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ಅಸಾಮಾನ್ಯ ಮತ್ತು ಅಪೂರ್ವವಾದ ಕ್ಷಣ."

– ಅಪ್ರತಿಮ
ದಿ ಎಕನಾಮಿಕ್ ಟೈಮ್ಸ್

ಮಕ್ಕಳಿಗಾಗಿ
ಒಂದು ಕಥಾ ಮುದ್ರೆ
ISBN 978-93-88284-81-3
₹ xxx
www.katha.org